**ವ್ಯಾಖ್ಯಾನ**

# <u>ಇನ್ನಾದರು ನಿನಗೆ ನೀನು ತಿಳಿಯದೆ</u>

**ಶ್ರೀ ಪುರಂದರ ದಾಸರ ಮುಂಡಿಗೆಯ ಚಿಂತನೆ:**

ಈ ಮುಂಡಿಗೆಯು ಶ್ರೀ ಪುರಂದರದಾಸರ ಕೇವಲ ಒಂದು ಹಾಡಲ್ಲ; ಇದು ಅತ್ಯಂತ ಆಳವಾದ ಆಧ್ಯಾತ್ಮಿಕ ಮತ್ತು ತಾತ್ವಿಕ ರಚನೆಗಳಲ್ಲಿ ಒಂದಾಗಿದೆ. ಈ ಕೃತಿಯಲ್ಲಿ ದಾಸರು ಜೀವನದ ಪ್ರತಿ ಹಂತವನ್ನೂ ವಿಮರ್ಶಿಸಿ, ಆತ್ಮನು ಹೇಗೆ ಲೌಕಿಕ ಮಾಯೆಯಲ್ಲಿ ಸಿಲುಕಿ ತನ್ನ ನಿಜ ಸ್ವರೂಪವನ್ನು ಮರೆತಿದ್ದಾನೆ ಎಂಬುದನ್ನು ವಿವರಿಸಿದ್ದಾರೆ. ಇದು ಮನುಷ್ಯನ ಅಂತರಂಗವನ್ನು ಬಡಿದೆಬ್ಬಿಸುತ್ತದೆ. ಇಲ್ಲಿ ದಾಸರು ನಮ್ಮನ್ನು (ಆತ್ಮನನ್ನು) ಸಂಬೋಧಿಸುತ್ತಾ, ಮನುಷ್ಯ ಜನ್ಮದ ಮೌಲ್ಯ, ಶರೀರದ ಅಶಾಶ್ವತತೆ ಮತ್ತು ಭಗವಂತನ ಸಾಕ್ಷಾತ್ಕಾರದ ಹಾದಿಯನ್ನು ಅತ್ಯಂತ ಮಾರ್ಮಿಕವಾಗಿ ವಿವರಿಸಿದ್ದಾರೆ. ಇದು ಮನುಷ್ಯನ ಅಂತರಂಗವನ್ನು ಬಡಿದೆಬ್ಬಿಸುವ ಒಂದು **'ಆಧ್ಯಾತ್ಮಿಕ ಕೈಗನ್ನಡಿ'**. ಪ್ರತಿ ನುಡಿಯಲ್ಲಿಯೂ ದಾಸರು ನೇರವಾಗಿ 'ಆತ್ಮ'ನನ್ನು ಎಚ್ಚರಿಸಿ, ಸಾತ್ವಿಕ ಮಾರ್ಗ ಹಿಡಿ ಎಂದು ಬುದ್ಧಿವಾದ ಹೇಳುತ್ತಿದ್ದಾರೆ.

**ಇನ್ನಾದರು ನಿನಗೆ ನೀನು ತಿಳಿಯದೆ ಇಂಥ**
**ಅನ್ಯಾಯವುಂಟೆ ಪೇಳೊ ಆತ್ಮ || ಪ ||**
**ಚೆನ್ನಾಗಿ ಕಂಡು ತಿಳಿದು ಚರಿಸುವರೆ ತಿರುಗಿ ತಿರುಗಿ**
**ಬಿನ್ನಾಣ ಬೇಡ ಕಂಡ್ಯ ಆತ್ಮ || ಅಪ || (ಆತ್ಮಾವಲೋಕನದ ಕರೆ)**

ದಾಸರು ನೇರವಾಗಿ 'ಆತ್ಮ'ನನ್ನು ಸಂಬೋಧಿಸುತ್ತಿದ್ದಾರೆ. ಮನುಷ್ಯನು ಬಾಹ್ಯ ಜಗತ್ತಿನ ಬಗ್ಗೆ ಸಾವಿರ ವಿಷಯಗಳನ್ನು ತಿಳಿಯುತ್ತಾನೆ, ವಿಜ್ಞಾನ-ತಂತ್ರಜ್ಞಾನಗಳನ್ನು ಅರಿಯುತ್ತಾನೆ. ಆದರೆ "ನಾನು ಯಾರು? ನನ್ನ ಈ ಜನ್ಮದ ಉದ್ದೇಶವೇನು?" ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುವುದಿಲ್ಲ. ಇಷ್ಟು ಉತ್ತಮವಾದ ನರಜನ್ಮ ಸಿಕ್ಕ ಮೇಲೆಯೂ ಆತ್ಮಜ್ಞಾನವನ್ನು ಪಡೆಯದಿರುವುದು ನಿನಗೆ ನೀನೇ ಮಾಡಿಕೊಳ್ಳುತ್ತಿರುವ ಅತಿದೊಡ್ಡ 'ಅನ್ಯಾಯ' ಎಂದು ದಾಸರು ಎಚ್ಚರಿಸುತ್ತಾರೆ.

ಈ ಸಂಸಾರದ ಸುಳಿಯಲ್ಲಿ ಸಿಲುಕಿ, ಇಷ್ಟೆಲ್ಲಾ ಅನುಭವಿಸಿದ ಮೇಲಾದರೂ ನಿನ್ನ ನಿಜ ಸ್ವರೂಪವನ್ನು ನೀನು ಅರಿಯದಿದ್ದರೆ ಇದಕ್ಕಿಂತ ದೊಡ್ಡ ಅನ್ಯಾಯ ಮತ್ತೊಂದಿಲ್ಲ. ಹೊರಗಿನ ಲೋಕದಲ್ಲಿ ಜಾಣತನ ತೋರಿಸುವ ನೀನು, ನಿನ್ನ ಒಳಗಿನ ಆತ್ಮನನ್ನು ಅರಿಯುವಲ್ಲಿ ಸೋಲಬೇಡ ಎಂದು ದಾಸರು ಎಚ್ಚರಿಸುತ್ತಾರೆ.

**ಎಷ್ಟು ಜನ್ಮವ ಪಡೆದೆ ಎಷ್ಟು ಬಸಿರಲಿ ಬಂದೆ**
**ಎಷ್ಟು ತನುವಾಗಿ ಬೆಳೆದೆ ಆತ್ಮ**
**ಎಷ್ಟು ಮೊಲೆ ಪಾಲುಂಡೆ ಎಷ್ಟು ದೇಶದಲಿದ್ದೆ**
**ಎಷ್ಟು ಸತಿಸುತರ ಪಡೆದೆ ಆತ್ಮ**
**ಎಷ್ಟು ಶಿಶುವೆಂದೆನಿಸಿಕೊಂಡು ಮೆರೆದೆ**
**ಎಷ್ಟು ಬನ್ನವ ತಾಳಿದೆ ಆತ್ಮ**
**ಎಷ್ಟು ಬಂಧುಗಳೊಡನೆ ಎಲ್ಲೆಲ್ಲಿ ಬಂದು ಬೆರೆದೆ**
**ಎಷ್ಟು ಗುಣದವರ ನೋಡೊ ಆತ್ಮ || 1 ||** **(ಜನ್ಮಗಳ ಸರಣಿ)**

ದಾಸರು ಇಲ್ಲಿ '**ಪುನರಪಿ ಜನನಂ ಪುನರಪಿ ಮರಣಂ**' ಎಂಬ ತತ್ವವನ್ನು ವಿವರಿಸುತ್ತಾರೆ. ಇದೊಂದು ಸಂಸಾರದ ಸುದೀರ್ಘ ಪಯಣ ಎಂದು ಹೇಳುತ್ತಾರೆ. ನೋಡು ಆತ್ಮನೇ,

- ನೀನು ಎಷ್ಟು ಬಾರಿ ಹುಟ್ಟಿ ಸತ್ತಿದ್ದೀಯೆ ಎಂದು ಎಂದಾದರೂ ಯೋಚಿಸಿದ್ದೀಯಾ?
- ೮೪ ಲಕ್ಷ ಜೀವರಾಶಿಗಳ ಯೋನಿಯಲ್ಲಿ ತಿರುಗುತ್ತಾ, ಎಷ್ಟು ತಾಯಂದಿರ ಗರ್ಭದಲ್ಲಿ ಬಂದು ಪಾಲುಂಡಿದ್ದೀಯೆ?
- ಪ್ರತಿ ಜನ್ಮದಲ್ಲೂ ಹೊಸ ಹೆಂಡತಿ, ಹೊಸ ಮಕ್ಕಳು, ಹೊಸ ಬಂಧುಗಳು ಸಿಕ್ಕಾಗ ಅವರಿಗಾಗಿ ಕಣ್ಣೀರು ಸುರಿಸಿದ್ದೀಯೆ?
- ಒಂದೊಂದು ಜನ್ಮದಲ್ಲೂ ಬೇರೆ ಬೇರೆ ದೇಶ, ಭಾಷೆ, ಜಾತಿಗಳಲ್ಲಿ ಬೆರೆತು ಹೋಗಿದ್ದೀಯೆ. ಆದರೆ ಇವಾವುದೂ ಶಾಶ್ವತವಾಗಿ ನಿನ್ನ ಜೊತೆ ಬಂದಿಲ್ಲವಲ್ಲ? ಈ ಕಷ್ಟದ ಪಯಣಕ್ಕೆ ಕೊನೆ ಎಂದು? ಈ ಮಾಯೆಯಲ್ಲಿ ಸಿಲುಕಿ ಎಷ್ಟು ತೊಳಲಾಡಿದ್ದೀಯಾ ಎಂದು ನೆನಪಿಸಿಕೊಳ್ಳಿ ಎನ್ನುತ್ತಾರೆ.

**ಎಲುವುಗಳನು ಕಡೆದು ಎಂಭತ್ತನಾಲ್ಕು ಕೀಲುಗಳು**
**ಬಲು ನರಂಗಳಲಿ ಬಿಗಿದು ಆತ್ಮ**
**ನೆಲೆ ರಕ್ತ ಮಾಂಸದಲಿ ನೆರಹಿ ಚರ್ಮವ ತೊಡಿಸಿ**
**ಬಲು ಬೊಂಬೆಯಾದೆಯಲ್ಲೊ ಆತ್ಮ**
**ಮಲಮೂತ್ರ ಪೂಜಿತದ ಮನೆಬಾ-**
**ಗಿಲೊಂಭತ್ತು ಬಳಿಕ ಕೊಂಡಿಪ್ಪೆಯಲ್ಲೊ ಆತ್ಮ**

**ಬಲವಂತನೆನಿಸುವರು ಪಂಚಭೂತಗಳಿಂದ**
**ಬೆಲೆಗೈವ ದೇಹ ಕಂಡ್ಯಾ ಆತ್ಮ || 2 ||** **(ದೇಹದ ನಶ್ವರತೆ)**

ವೈರಾಗ್ಯ ಮೂಡಿಸಲು ದಾಸರು ಶರೀರದ ಅಸಹ್ಯಕರ ಮತ್ತು ಅಸ್ಥಿರ ರೂಪವನ್ನು ವಿವರಿಸುತ್ತಾರೆ.

- ನಮ್ಮ ದೇಹವು ಬರಿಯ ಮಾಂಸದ ಬೊಂಬೆ. ಲಳ ಕೀಲುಗಳು (Joints) ಮತ್ತು ಬಲವಾದ ನರಗಳಿಂದ ಇದನ್ನು ಬಿಗಿಯಲಾಗಿದೆ.
- ರಕ್ತ, ಮಾಂಸದ ಮೇಲೆ ಚರ್ಮವನ್ನು ಹೊದಿಸಿ ಇದನ್ನು ಸುಂದರವಾಗಿ ಕಾಣುವಂತೆ ಮಾಡಲಾಗಿದೆ.
- ಒಂಬತ್ತು ಬಾಗಿಲುಗಳಿರುವ (ನವದ್ವಾರಗಳು) ಈ ಮನೆಯೊಳಗೆ ತುಂಬಿರುವುದು ಮಲ-ಮೂತ್ರಗಳೇ ಹೊರತು ಮತ್ತೇನಲ್ಲ.
- ಪಂಚಭೂತಗಳಿಂದಾದ ಈ ದೇಹಕ್ಕೆ 'ಬಲವಂತ' ಎಂದು ಅಹಂಕಾರ ಪಡುತ್ತೀಯಲ್ಲಾ, ಇದು ಮಣ್ಣಿಗೆ ಸೇರುವ ವಸ್ತು ಎಂದು ತಿಳಿಯೊ ಆತ್ಮನೇ.

ಇಂತಹ ಈ ಶರೀರಕ್ಕೆ ನೀನು ಅತಿಯಾದ ಬೆಲೆ ಕೊಡುತ್ತಿದ್ದೀಯೆ. ಇದು ಪಂಚಭೂತಗಳಿಂದಾದ ಒಂದು ಅಸ್ಥಿರ ವಸ್ತು ಎಂಬುದು ನಿನಗೆ ನೆನಪಿರಲಿ.

**ಮೂವನೆರದ ಭಂಡಿ ಹೊಲನ್ಯಾರದೆಂಬುವುದು**
**ಮೂರು ಗುಣದವರ ನೋಡೊ ಆತ್ಮ**
**ತಾವರದ ಅಷ್ಟ ಮದ ಜವಿಯಲಿ ಪೋಪುವದು**
**ಭಾವದವರ ನೋಡೊ ಆತ್ಮ**
**ಭಾವರದ ಷಡ್ವರ್ಗ ಘಾತಕ ಕೊಂಪೆಯಿದು**
**ತಾವೆನಿಸಿಕೊಂಬುವುದಲ್ಲೋ ಆತ್ಮ**
**ಭಾವಜನ ಕಲೆ ನೆಲೆಯ ಬಿಟ್ಟರು**
**ಹದಿನಾರು ಮಂದಿ ಪಾರಿಯಾರಿರರು ಕಂಡ್ಯಾ ಆತ್ಮ || 3 ||** **(ಆಂತರಿಕ ಶತ್ರುಗಳ ಜಾಲ)**

ಈ ಒಂದು ನುಡಿಯಲ್ಲಿ ನಮ್ಮ ಒಳಗಿನ ಶತ್ರುಗಳು ನಮ್ಮನ್ನು ಮೋಕ್ಷದ ಹಾದಿಯಿಂದ ದೂರ ತಳ್ಳುತ್ತಿವೆ ಎಂದು ಹೇಳಿದ್ದಾರೆ.

- **ಮೂರು ಗುಣಗಳು:** ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಗುಣಗಳ ಸೆರೆಯಲ್ಲಿ ನೀನು ಸಿಲುಕಿದ್ದೀಯೆ.
- **ಅಷ್ಟ ಮದಗಳು:** ಅನ್ನ ಮದ, ಅರ್ಥ ಮದ, ಪ್ರಾಯ ಮದ, ವಿದ್ಯಾ ಮದ, ಕುಲ ಮದ, ಕರ್ಮ ಮದ, ಅಧಿಕಾರ ಮದ ಮತ್ತು ರೂಪ ಮದ - ಈ ಎಂಟು ಮದಗಳು ಮನುಷ್ಯನನ್ನು ಕುರುಡಾಗಿಸುತ್ತವೆ. ಇವುಗಳನ್ನು ಬಿಡದಿದ್ದರೆ ಅಧಃಪತನ ಖಂಡಿತ.
- **ಅರಿಷಡ್ವರ್ಗಗಳು:** ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಈ ಶರೀರವೆಂಬ ಮನೆಯಲ್ಲಿರುವ 'ಕೊಲೆಗಾರರು' (ಘಾತಕರು). ಇವು ನಿನ್ನನ್ನು ವಿನಾಶದ ಹಾದಿಗೆ ಕೊಂಡೊಯ್ಯುತ್ತಿವೆ. ಇವುಗಳ ಗುಲಾಮನಾಗಬೇಡ.
- ಇವು ನಿನ್ನನ್ನು ಮೋಕ್ಷದ ಹಾದಿಯಿಂದ ದೂರ ತಳ್ಳುತ್ತವೆ.

**ಆಡಿ ತಪ್ಪಲು ಬೇಡ, ನೋಡಿ ಕೊಡದಿರಬೇಡ**
**ಬೇಡಿದರೆ ಕಾಡಬೇಡ ಆತ್ಮ**
**ಚಾಡಿಚುಡಿತಗಳಾಡಿ ಸಲೆ ಪಂಥಗಳನಾಡಿ**
**ಕೆಡುಕ ನೀನಾಗಬೇಡ ಆತ್ಮ**
**ಆಡಿ ಹಲವರ ಜರೆದು, ಹಗರಣಕೆ ಗುರಿಮಾಡಿ**
**ಆಡಿ ಹಮ್ಮಿಸಬೇಡ ಆತ್ಮ**
**ನೆಡಿಗಂಡದಿನನಾಗಿ ನಂಬಿದರೆ ಸಲಹನೇ**
**ನರಕರುಹನಾಗಬೇಡ ಆತ್ಮ || 4 ||** **(ಸಾಮಾಜಿಕ ಮತ್ತು ವೈಯಕ್ತಿಕ ನೈತಿಕತೆ)**

**ನೆಚ್ಚದಿರು ಈ ಒಡಲ, ನೆಚ್ಚದಿರು ಈ ದೋರ್ಬಲವ**
**ನೆಚ್ಚದಿರು ಈ ಸಿರಿಯನು ಆತ್ಮ**
**ಹೆಚ್ಚದಿರು ಉಬ್ಬಿನಲಿ ಹೆಚ್ಚದಿರು ಕೊಬ್ಬಿನಲಿ**
**ಹೆಚ್ಚದಿರು ಕ್ರೂರದಲಿ ಆತ್ಮ**
**ಕಚ್ಚದಿರು ಎಲ್ಲರಲಿ, ಕಚ್ಚದಿರು ಬಲ್ಲರಲಿ**
**ಕಚ್ಚದಿರು ಶ್ವಾನನಂತೆ ಆತ್ಮ**
**ಬೆಚ್ಚದಿರು ದೃಢದಲ್ಲಿ, ಬೆಚ್ಚದಿಂದ್ರಿಯಗಳಲಿ**
**ಬೆಚ್ಚದಿರು ಚಿತ್ತದಲ್ಲಿ ಆತ್ಮ || 5 ||** **(ನೈತಿಕ ನಡವಳಿಕೆ)**

ಇಲ್ಲಿ ದಾಸರು, ಜೀವನು ತನ್ನ ವೈಯಕ್ತಿಕ ವಿಷಯದಲ್ಲಿ ಮತ್ತು ಸಮಾಜದಲ್ಲಿ ಹೇಗಿರಬೇಕೆಂದು ವಿವರವಾಗಿ ಬೋಧಿಸುತ್ತಾರೆ.

- **ಆಡಿ ತಪ್ಪಬೇಡ:** ಕೊಟ್ಟ ಮಾತಿಗೆ ತಪ್ಪುವುದು ಪಾಪ.
- **ಚಾಡಿ ಹೇಳಬೇಡ:** ಇತರರನ್ನು ನಿಂದಿಸಿ, ಹೀಯಾಳಿಸಿ ಸುಖ ಪಡಬೇಡ. ಹಗರಣಗಳಿಗೆ ಗುರಿಯಾಗಬೇಡ.
- **ಸಿರಿ ಮತ್ತು ಬಲ:** ಸಂಪತ್ತು ಬಂತು ಎಂದು ಉಬ್ಬಬೇಡ, ದೇಹದ ಬಲವಿದೆ ಎಂದು ಕೊಬ್ಬಬೇಡ.
- **ನಾಯಿಯ ಗುಣ:** ದಾಸರು ಇಲ್ಲಿ ಒಂದು ಕಟು ಉಪಮೆಯನ್ನು ಬಳಸಿದ್ದಾರೆ. ನಾಯಿಯಂತೆ ಸಣ್ಣ ವಿಷಯಗಳಿಗೆ ಎಲ್ಲರ ಮೇಲೆ 'ಕಚ್ಚಾಡಬೇಡ' (ಜಗಳವಾಡಬೇಡ). ಇಂದ್ರಿಯಗಳಿಗೆ ಹೆದರದೆ ಮನಸ್ಸನ್ನು ಸ್ಥಿರವಾಗಿಡು, ದೃಢವಾಗಿಡು.

**ವೇದ ಶ್ರುತಿಗಳ ಕೇಳು, ಓದು ರಾಮಾಯಣವ**
**ಭೇದಿಸು ಭಾಷಿತವನು ಆತ್ಮ**
**ಆದಿ ಗುರುಹಿರಿಯರಲ್ಲಿ ಅಧಿಕ ಬುದ್ಧಿಯ ಕೊಡು**
**ಆಗಮವ ತಿಳಿದು ಬಾಳು ಆತ್ಮ**
**ಕದ್ದ ಕಳ್ಳನ ಹಿಡಿವ ಕಪಟ ಕಾಮನ ಗೆಲಿವ**
**ಕಾಯಕದ ಚಿಂತೆ ಮಾಡು ಆತ್ಮ**
**ಕಾದ ಹಾಲಿನ ತೆರದಿ ಕಲ್ಮಷವ ಕಳೆದು**
**ಉಪಕಾರಿ ಜೀವನಾಗೊ ಆತ್ಮ || 6 ||** **(ಸಾಧನೆಯ ಹಾದಿ)**

**ದೇಶ ಮೋಹ ಚಿಂತನೆಯ ವಶವೃತ್ತಿಯೊಳಗಾಗಿ**
**ಅಸುರ ನೀನಾಗಬೇಡ ಆತ್ಮ**
**ಶಶಿಮುಖಿಯರೆನಿಪ ಪರಸ್ತ್ರೀಯರಲಿ ಕಣ್ಣಿಟ್ಟು**
**ಪಶು-ಪಕ್ಷಿ ಆಗಬೇಡ ಆತ್ಮ**
**ಪುಸಿಯ ಸಂಸಾರ ಸಂಭೋಗದತಿಶಯದ ಕೊಬ್ಬಿನಲಿ**
**ನೀ ಸದಾ ದೀನನಾಗಬೇಡ ಆತ್ಮ**
**ಹಸನಾದ ನರಜನ್ಮ ಹಲವು ಜನ್ಮದಿ ಜನಿಸಿ**
**ದೆಸೆಗೆಟ್ಟು ತಿರುಗಬೇಡ ಆತ್ಮ || 7 ||** **(ಸುಧಾರಣೆಯ ಹಾದಿ)**

- ವೇದಗಳನ್ನು ಕೇಳು, ರಾಮಾಯಣವನ್ನು ಓದು. ಗುರು ಹಿರಿಯರಿಗೆ ಗೌರವ ನೀಡಿ ಅವರಿಂದ ಜ್ಞಾನ ಪಡೆ. ಕಾಯ ಕಲ್ಪದಲ್ಲಿ (ಕೆಲಸದಲ್ಲಿ) ಪ್ರಾಮಾಣಿಕನಾಗಿರು.

- **ಶುದ್ಧೀಕರಣ:** ಕಾಯಿಸಿದ ಹಾಲು ಹೇಗೆ ಗಟ್ಟಿಯಾಗಿ ಶುದ್ಧವಾಗುತ್ತದೆಯೋ, ಹಾಗೆಯೇ ನಿನ್ನ ಜೀವನದ ಕಲ್ಮಶಗಳನ್ನು ಕಳೆದೊಗೆದು ಸಮಾಜಕ್ಕೆ 'ಉಪಕಾರಿ'ಯಾಗು.
- **ಅಸುರ ಪ್ರವೃತ್ತಿ:** ದೇಶದ ವ್ಯಾಮೋಹ ಅಥವಾ ಸ್ವಾರ್ಥದ ಚಿಂತನೆಯಲ್ಲಿ ಮುಳುಗಿ ಅಸುರನಾಗಬೇಡ.
- **ಪಶು-ಪಕ್ಷಿ ಜನ್ಮ:** ಪರಸ್ತ್ರೀಯರ ಮೇಲೆ ಕಣ್ಣಿಡುವುದು ಪಶುಗಳಿಗೆ ಸಮಾನವಾದ ಗುಣ. ಹಾಗೆ ಮಾಡಿದರೆ ಮುಂದಿನ ಜನ್ಮದಲ್ಲಿ ಪಶುಗಳಾಗಿ ಹುಟ್ಟಬೇಕಾದೀತು ಎಂದು ಎಚ್ಚರಿಸುತ್ತಾರೆ. ಈ ಅಮೂಲ್ಯವಾದ ನರಜನ್ಮವನ್ನು ಕಾಮನೆಗಳಿಗೆ ಬಲಿಯಾಗಿಸಬೇಡ.

ಎಲೆ ಜೀವನೇ ಬೇಗನೆ ಸುಧಾರಿಸಿ ಸಾಧನೆಯ ಮಾರ್ಗವನ್ನು ಹಿಡಿ ಎಂದು ದಾಸರು ಎಚ್ಚರಿಸುತ್ತಿದ್ದರೆ.

**ಸತ್ಯವೆಂಬದು ದೊಡ್ಡ ಸಾಮ್ರಾಜ್ಯ ಪದವಿಯಲಿ**
**ನಿತ್ಯ ಓಲಗವ ಮಾಡೊ ಆತ್ಮ**
**ಅತ್ಯಧಿಕ ಫಲವೀವ ಅನ್ನದಾನಗಳಲ್ಲಿ**
**ಮೃತ್ಯು ಭಯವೆಲ್ಲ ನೂಕೊ ಆತ್ಮ**
**ಮುತ್ತು ಇಲ್ಲದ ರತ್ನ ಮೂರಂತರಂಗದಲಿ**
**ಮೂವ್ವದೊಡೆಯನ ಪೂಜಿಸೋ ಆತ್ಮ**
**ಕತ್ತಲೆಯ ಕಳೆಕಳೆದು ಘನ ಪಾಪಗಳನೆಲ್ಲ-**
**ನೊತ್ತಿ ನಿಜಬೆಳಕ ನೋಡೊ ಆತ್ಮ || 8 ||** **(ಸತ್ಯ ಮತ್ತು ದಾನದ ಮಹತ್ವ)**

**ಕುಲಗೋತ್ರವೊಂದಾಗೊ ನೆಲಸೂತ್ರನೊಂದಾಗೊ**
**ಸಲಹು ಗುಣಸಾಂದ್ರನಾಗೊ ಆತ್ಮ**
**ಬಲು ಶೂರ ನೀನಾಗೊ ಭಾಗವತ ನೀನಾಗೊ**
**ಪರಮ ಪುಣ್ಯಾತ್ಮನಾಗೊ ಆತ್ಮ**
**ಚೆಲುವ ಗುರು ಮಧ್ವಪತಿ ಶ್ರೀಲಕ್ಷ್ಮಿ ಕೃಪೆಯಿಂದ**
**ಪಾವನದ ಶೀಲನಾಗೊ ಆತ್ಮ**
**ಇಳೆಯೊಳಗೆ ಪುರಂದರ ವಿಠಲನಂಘ್ರಿಗಳ ಭಜಿಸಿ**
**ಎಡೆಬಿಡದೆ ದಾಸನಾಗೊ ಆತ್ಮ || 9 ||** **(ಶರಣಾಗತಿ ಮತ್ತು ಅಂತಿಮ ಗುರಿ)**

- ಸತ್ಯವೇ ಒಂದು ದೊಡ್ಡ ಸಾಮ್ರಾಜ್ಯವಿದ್ದಂತೆ. ಸತ್ಯದ ಹಾದಿಯಲ್ಲಿ ನಡೆಯುವುದೇ ಭಗವಂತನಿಗೆ ಮಾಡುವ ಅತಿದೊಡ್ಡ ಸೇವೆ.

- ಅನ್ನದಾನದಂತಹ ಪುಣ್ಯ ಕಾರ್ಯಗಳು ಮೃತ್ಯುವಿನ ಭಯವನ್ನು ದೂರ ಮಾಡುತ್ತವೆ.
- ನಿನ್ನ ಅಂತರಂಗದ ಗುಡಿಯಲ್ಲಿ ಜ್ಞಾನದ ದೀಪವನ್ನು ಬೆಳಗು. ಅಲ್ಲಿರುವ 'ಮೂವ್ವದೊಡೆಯ' (ಮೂರು ಲೋಕದ ಒಡೆಯನಾದ ಹರಿ) ನನ್ನು ಪೂಜಿಸು.
- **ಭಾಗವತ ನೀನಾಗೊ:** ಭಗವಂತನ ಭಕ್ತನಾಗು, ಶೂರನಾಗು (ಇಂದ್ರಿಯಗಳನ್ನು ಗೆದ್ದವನೇ ಶೂರ).
- **ಗುರು ಮಧ್ವಪತಿ:** ಶ್ರೀ ಮಧ್ವಾಚಾರ್ಯರ ಸಿದ್ಧಾಂತವನ್ನು ಅನುಸರಿಸುತ್ತಾ, ಮಧ್ವಪತಿ ಶ್ರೀಹರಿಯ ಕೃಪೆಯಿಂದ, ಪುರಂದರ ವಿಠಲನ ಪಾದಗಳನ್ನು ಭಜಿಸಿ ದಾಸನಾಗಿ ಬಾಳು. ಆಗ ಮಾತ್ರ ನಿನ್ನ ಜನ್ಮ ಸಾರ್ಥಕವಾಗುತ್ತದೆ.

ಎಲೆ ಆತ್ಮನೇ ಭಗವಂತನು ಕೊಟ್ಟ ಈ ಅಮೂಲ್ಯವಾದ ಶರೀರವನ್ನು ಭವಸಾಗರದ ಮಾಯೆಗೆ ಸಿಲುಕಿಸದೆ ನಿತ್ಯ ಸಾಧನೆಗೆ ಉಪಯೋಗಿಸಿ ಸರ್ವಕಾಲಕ್ಕೂ ಪುರಂದರ ವಿಠ್ಠಲನ ದಾಸನಾಗು ಎಂದು ಪುರಂದರ ದಾಸರು ಕಳಕಳಿಯಿಂದ ಎಚ್ಚರಿಸುತ್ತಿದ್ದರೆ.

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** Dr. ಅನಂತ ರಾವ್ ದಂಡಿನ್, ಬೆಂಗಳೂರು.